# ನಂಬಿ ಕೆಟ್ಟವರಿಲ್ಲವೊ ರಂಗಯ್ಯನ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 275.
2. **Ref.**: Sri Purandara Dasara Krutigalu – Sri Gorebala Hanumantha Rayara Hasta Prati Sangrahadinda – Published by Sri Varadendra Haridasa Sahitya Mandala, Lingasuguru, Raichur Dist., Karnataka (2013), page No. 66.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Sri. Pavanje Guru Rao.
4. **Note:** Lyrics given here are as per Ref. 1. The wordings in Ref. 2 are same as in Ref. 1 with few minor changes, which are not considered here. There are so many other versions are there in the social media.
5. **Note:** Singer has followed these lyrics.

ರಾಗ: ಕಲ್ಯಾಣಿ            ತಾಳ: ಆದಿ

ನಂಬಿ ಕೆಟ್ಟವರಿಲ್ಲವೊ ರಂಗಯ್ಯನ
ನಂಬದೆ ಕೆಟ್ಟರೆ ಕೆಡಲಿ    || ಪ ||

ಅಂಬುಜನಾಭನ ಅಖಿಳ ಲೋಕೇಶನ
ಅಪ್ರಮೇಯನಾದ ಆದಿ ಪುರುಷನ    || ಅಪ ||

ಪಿತನ ತೊಡೆಯ ಮೇಲೆ ಧ್ರುವರಾಯ
ಹಿತದಿಂದ ಕುಳಿತಿರಲು
ಮತಿಹೀನಳಾದ ಸುರುಚಿ ದೇವಿ ನೂಕಲು
ಹಿತದಿ ಧ್ರುವಗೆ ಪಟ್ಟ ಕೊಟ್ಟ ಮುರಾರಿಯ    || 1 ||

ವರ ಪ್ರಹ್ಲಾದನ ಪಿತನು ಬಾಧಿಸುತಿರೆ
ಹರಿ ನೀನೆ ಗತಿಯೆನಲು
ಪರಮ ಪ್ರೀತಿಯಿಂದ ತರಳನ ಪಾಲಿಸಿ

ದುರುಳ ಹಿರಣ್ಯಕಶ್ಯಪನ ಸೀಳಿದ ಧೊರೆಯ || 2 ||

ಕರಿರಾಜನ ಸಲಹಿ ಅಂಜದಿರೆಂದು ಆ -
ದರಿಸಿದವರು ಯಾರೋ
ಗರುಡಗಮನ ಶ್ರೀ ಪುರಂದರ ವಿಠಲನ
ಚರಣ ಕಮಲವನ್ನು ದೃಢದಿಂದ ನಂಬಿರೊ || 3 ||

**Classification:** Keertane
**Ankita:** sri purandara vittala
**Location:** NA
**Category:** Hari Sarvottama,
**Sub-Category:** ranga, aprameya, Krishna, tande, Dhruva, tayi, prahallada, asura, priti, arasa, gaja, Vishnu, garuda, padma,
**Pravachana:** NA
**Explanation:** NA